**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.Lok.6/2014**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಸ್. ಟಿ. ಶ್ರೀನಿವಾಸ |
| ತಂದೆಯ ಹೆಸರು | : | ತಿಮ್ಮಪ್ಪ ಎಸ್. ಹೆಚ್. |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ತುರ್ಚಘಟ್ಟ |

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 7

ದಿ: 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀಮತಿ ಸಿ.ಪಿ.ಎ.)**:

1. ಈಗ 14 ವರ್ಷಗಳ ಹಿಂದೆ ನಾನು ಮೂರು ಎಕರೆ ಜಮೀನು ದಾವಣಗೆರೆಯ ಯರವನಾಗತಿಹಳ್ಳಿ ಗ್ರಾಮದಲ್ಲಿ ಚಾಸಾ-8 ರವರಿಂದ ಖರೀದಿ ಮಾಡಿದ್ದೆ. ಅದೇ ದಿನ ನಾನು ಬಿ. ತಿಪ್ಪಣ್ಣರವರಿಂದ ಮತ್ತೊಂದು 03 ಎಕರೆ ಜಮೀನನ್ನು ಖರೀದಿ ಮಾಡಿದ್ದೆ. ಈ ಎರಡು ಜಮೀನಿನ ಅಳತೆಯನ್ನು ಮಾಡಿಸಲು ಚಾಸಾ-1 ರವರಿಗೆ ಹೇಳಿದ್ದೆ. ಆಗ ಅವರು ತಾಲ್ಲೂಕು ಸರ್ವೇಯರ್ ಗೆ ಅರ್ಜಿಸಲು ಹೇಳಿದರು. ಅದರಂತೆ ನಾನು ಅರ್ಜಿಯನ್ನು ಕೊಟ್ಟಿದ್ದೆ. ಅಳತೆಗೆ ಆರೋಪಿಯು ಬಂದಿದ್ದರು. ಅಳತೆ ಮುಗಿದ ನಂತರ ಲಂಚ ಹಣವನ್ನು ಕೇಳಿದರು. ಆಗ ನಾನು ಚಾಸಾ-1 ರವರೇ ಎಲ್ಲಾ ಜವಬ್ದಾರಿ ತೆಗೆದುಕೊಂಡಿದ್ದರು ಅವರ ಹತ್ತಿರ ಕೇಳಿ ಅಂತ ಹೇಳಿದೆ. ಅದಕ್ಕೆ ನಾನು ಆ ವಿಷಯವನ್ನು ಚಾಸಾ-1 ರವರಿಗೆ ಹೇಳಿದೆ. ಚಾಸಾ-1 ರವರು ಆರೋಪಿಗೆ ₹500/- ರೂಪಾಯಿ ಕೊಡಲು ಹೋದಾಗ ಆರೋಪಿ ಆ 500 ರೂಪಾಯಿ ನೋಟನ್ನು ಎಸೆಯಲು ಹೋದಾಗ ಚಾಸಾ-1 ರವರು ₹1000/- ರೂಪಾಯಿ

ಕೊಟ್ಟು ಹೋದರು. ಈ ಘಟನೆಯಾದ 15 ದಿನಗಳ ನಂತರ ಬೇರೆ ಜಮೀನಿನ ಅಳತೆ ಮಾಡಲು ಆರೋಪಿ ತುರ್ಚಘಟ್ಟಕ್ಕೆ ಬಂದಿದ್ದರು. ಬಸ್ ಸ್ಟ್ಯಾಂಡ್ ಹತ್ತಿರ ನನಗೆ ಸಿಕ್ಕಿದ್ದರು. ನನ್ನ ಜಮೀನಿಗೆ ಸಂಬಂಧಿಸಿದ ಅಳತೆ ಬಗ್ಗೆ ಎಲ್ಲಾ ready ಇದೆ ₹2000/- ಹಣ ಕೊಟ್ಟು ತೆಗೆದುಕೊಂಡು ಹೋಗಿ ಅಂತ ತಿಳಿಸಿದರು. ಸದರಿ ವಿಷಯವನ್ನು ನಾನು ಚಾಸಾ-1 ರವರಿಗೆ ತಿಳಿಸಿದೆನು. ಅದಕ್ಕೆ ಅವರು ಆರೋಪಿಯೊಂದಿಗೆ ಮಾತನಾಡುತ್ತೇನೆ ಅಂತ ಹೇಳಿದರು. 04-05 ದಿವಸಗಳ ನಂತರ ನಾನು ತಾಲ್ಲೂಕು ಕಛೇರಿಗೆ ನನ್ನ ಕೆಲಸದ ನಿಮಿತ್ಯ ಹೋಗಿದ್ದೆ, ಅಲ್ಲಿ ನನಗೆ ಚಾಸಾ-1 ರವರು ಭೇಟಿಯಾದರು. ಆಗ ಅವರು ಆರೋಪಿ ಲಂಚದ ವಿಚಾರದಲ್ಲಿ Trap ಆಗಿದ್ದಾರೆ ನನಗೆ ಅಂತ ವಿಚಾರ ಹೇಳಿದರು. ಆಗ ತನಿಖಾಧಿಕಾರಿಗಳು ಮತ್ತು ಲೋಕಾಯುಕ್ತ ಪೊಲೀಸರು ಬಂದಿದ್ದರು. ತನಿಖಾಧಿಕಾರಿಗಳು ಚಾಸಾ-1 ರವರನ್ನು ಪರಿಚಯ ಮಾಡಿಕೊಂಡರು. ನಾನು ನಡೆದ ವಿಷಯವನ್ನು ಹೇಳಿದೆ. ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡರು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-3 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಇ) ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀಮತಿ ಕೆ.ಎನ್.ಯು., ವಕೀಲರಿಂದ ಆರೋಪಿತರ ಪರವಾಗಿ**:

ಈ ಹಂತದಲ್ಲಿ ಮಧ್ಯಾಹ್ನ 2.00 ಗಂಟೆ ಆಗಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 20-12-2025 ರಂದು ಮಧ್ಯಾಹ್ನ 3.30 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲುಃ ಶ್ರೀಮತಿ ಕೆ.ಎನ್.ಯು., ವಕೀಲರಿಂದ ಆರೋಪಿತರ ಪರವಾಗಿ**</u>:

2. ನನಗೆ ಒಟ್ಟು ಎರಡುವರೆ ಎಕರೆ ಜಮೀನು ಇದೆ. ನಾನು ವ್ಯವಸಾಯ ಬಿಟ್ಟು ಬೇರೆ ಏನೂ ಕೆಲಸ ಮಾಡುವುದಿಲ್ಲ. ಯಾವುದೇ ಒಂದು ಜಮೀನಿನನ್ನು ಖರೀದಿ ಮಾಡುವ ಪೂರ್ವದಲ್ಲಿ ಅದರ ಹದಬಸ್ತು ಆದ ಮೇಲೆ ಖರೀದಿ ಮಾಡುತ್ತೇವೆ ಅಂದರೆ ನಿಜ. ನಾನು ಖರೀದಿ ಮಾಡುವಂತಹ ಜಮೀನು ಮುಂಚೆಯೇ ಹದಬಸ್ತು ಆಗಿತ್ತು. ಖರೀದಿ ಮಾಡುವವರು ಆ ಜಮೀನು ಒತ್ತುವರಿ ಆಗಿದೆಯೋ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡಿಯೇ ಖರೀದಿ ಮಾಡುತ್ತಾರೆ ಅಂದರೆ ನಿಜ.

3. ಪಂಚನಾಮೆಯಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಆರೋಪಿಯು ಲಂಚವನ್ನು ಪಡೆಯುತ್ತಿದ್ದನ್ನು ನಾನು ತಾಲ್ಲೂಕು ಕಛೇರಿಯಲ್ಲಿ ಕಣ್ಣಾರೆ ನೋಡಿದ್ದೇನೆ. ಲೋಕಾಯುಕ್ತ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ನಾನು ಕಣ್ಣಾರೆ ಚಾಸಾ-1 ರವರು ಲಂಚದ ಹಣವನ್ನು ಆರೋಪಿಗೆ ಕೊಡುತ್ತಿರುವುದನ್ನು ನಾನು ನೋಡಿರುವುದಿಲ್ಲ ಅಂದರೆ ಸುಳ್ಳು. ಚಾಸಾ-1 ರವರು ಲಂಚದ ಹಣವನ್ನು ಆರೋಪಿಗೆ ಕೊಟ್ಟರು.

ಪ್ರಶ್ನೇಃ ಅದು ಚಾಸಾ-1 ರವರ ಜಮೀನು ಇರುವುದಿಲ್ಲ?

ಉತ್ತರಃ ಅದು ಚಾಸಾ-1 ರವರ ಹೆಂಡತಿಯ ಜಮೀನು ಇರುತ್ತದೆ.

4. ನಿಪಿ-3 ರಲ್ಲಿ ಆರೋಪಿ ಏನು ಹೇಳಿದ್ದಾರೆ ಅಂತ ನನಗೆ ಗೊತ್ತಿಲ್ಲ. ಆ ದಿನ ಆದಂಹತ ಘಟನೆಯ ಬಗ್ಗೆ ನಾನು ಸಹಿ ಮಾಡಿದ್ದೇನೆ. ತನಿಖಾಧಿಕಾರಿಗಳು ಏನು ತನಿಖೆ ಮಾಡಿದ್ದಾರೆ ಅಂತ ನಿಪಿ-3 ರಲ್ಲಿ ಬರೆದಿರುವುದು ನನಗೆ ಗೊತ್ತಿಲ್ಲ. ಲೋಕಾಯುಕ್ತ ಪೊಲೀಸರು ಪಂಚನಾಮೆಗೆ ಸಹಕರಿಸಲು ನೋಟಿಸ್ಸು ಜಾರಿ ಮಾಡಿಲ್ಲ. ಚಾಸಾ-1 ರವರು ನನಗೆ ಬರಲು ಹೇಳಿದ್ದರಿಂದ ನಾನು ಆ ಕಛೇರಿಗೆ ಹೋದೆ

ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಆರೋಪಿಯು ಲಂಚದ ಹಣವನ್ನು ತೆಗೆದುಕೊಂಡಿದ್ದಾರೆ ಅಂತ ನಾನು ಕಣ್ಣಾರೆ ನೋಡಿದ್ದೇನೆ ಅಂತ ಹೇಳಿಕೆಯಲ್ಲಿ ಹೇಳಿಲ್ಲ ಅಂದರೆ ನಾನು ಘಟನೆಯನ್ನು ಕಣ್ಣಾರೆ ನೋಡಿದ್ದೇನೆ. ನನ್ನ ಸಮಕ್ಷಮ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಆರೋಪಿ ಲಂಚದ ಹಣವನ್ನು ಸ್ವೀಕರಿಸಿರುವುದಿಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.